**ಎರಡನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂಃ ನ್ಯಾಯಾಲಯ, ಮದ್ದೂರು.**

**ಸಿಸಿ 1159/2015**

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಎಂ ಎಸ್ ಉಮೇಶ್ | ಚಾ.ಸಾ-8 |
| ತಂದೆಯ ಹೆಸರು | - | ಎಲ್ ಸೋಮೇಗೌಡ | ಪ್ರಾ.ಸಾ-5 |
| ವಯಸ್ಸು | - | 67 ವರ್ಷ | |
| ಉದ್ಯೋಗ | - | ನಿವೃತ್ತ ಆಡಳಿತ ಅಧಿಕಾರಿ, ಮಂಡ್ಯ ಹಾಲು ಒಕ್ಕೂಟ ಮಂಡಳಿ | |
| ವಾಸಸ್ಥಳ | - | ಸೋಮೇಗೌಡರ ಬೀದಿ, ಮದ್ದೂರು | |

ದಿನಾಂಕಃ 28-07-2023 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ:ಅಭಿಯೋಜನೆಯ ಪರಃ ಎಪಿಪಿ ಯವರಿಂದ:**

ನ್ಯಾಯಾಲಯದ ಮುಂದೆ ಇರುವ ಆರೋಪಿಯ ಪರಿಚಯ ಇದೆ. ಅವರು ನಮ್ಮೊಂದಿಗೆ ಕೆಲಸ ಮಾಡುತ್ತಿದ್ದರು. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ದಾಖಲೆ ಅಮಾನತ್ತು ಮಹಜರ್ ಆಗಿದ್ದು, ಅದನ್ನು ಈಗಾಗಲೇ ನಿಪಿ-4 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-4 ಬಿ ಎಂದು ಗುರುತಿಸಲಾಯಿತು. ಸದರೀ ಸಹಿಯನ್ನು ಸುಮಾರು ವರ್ಷಗಳ ಹಿಂದೆ ಮಾಡಿರುತ್ತೇನೆ. ಎಲ್ಲಿ ಹಾಗೂ ಯಾವ ವಿಚಾರವಾಗಿ ಮಾಡಿದ್ದೇನೆಂದು ಮರೆತಿದ್ದೇನೆ. ಪೋಲೀಸರು ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ. ಸದರೀ ಸ್ಥಳದಲ್ಲಿ ಯಾರು ಯಾರು ಇದ್ದರು ಎಂದು ನನಗೆ ಗೊತ್ತಿಲ್ಲ.

**(ಈ ಹಂತದಲ್ಲಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸದರಿ ಸಾಕ್ಷಿದಾರರನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿದ್ದು ಅನುಮತಿ ನೀಡಲಾಯಿತು.)**

**<u>ಪಾಟೀ ಸವಾಲುಃ ಮಾನ್ಯ ಎ ಪಿ ಪಿ ಯವರಿಂದಃ</u>**

ದಿನಾಂಕಃ 04.05.2012 ರಂದು, ಗೆಜ್ಜಲಗೆರೆ ಗ್ರಾಮದ ಕೆ ಎಂ ಎಫ್ ಆಡಳಿತ ಕಛೇರಿಯಲ್ಲಿ ಪೋಲೀಸಿನವರು ಘಟನೆಗೆ ಸಂಬಂಧಿಸಿದಂತೆ ಮಧ್ಯಾಹ್ನ 12.30-01.00 ಗಂಟೆಯ ತನಕ ನಿವು ಮತ್ತು ಚಾ.ಸಾ. 7 ಮತ್ತು 9 ರವರ ಸಮಕ್ಷಮದಲ್ಲಿ ಮಹಜರ್ ಕ್ರಮ ಜರುಗಿಸಿರುತ್ತಾರೆಂದರೆ ನನಗೆ ಗೊತ್ತಿಲ್ಲ. ದಿನಾಂಕಃ 18.08.2005 ರಂದು ಆರೋಪಿ 1 ರವರು ಗೆಜ್ಜಲಗೆರೆಯ ಮನ್ ಮುಲ್ ಹಾಲಿನ ಡೈರಿಯಲ್ಲಿ ಆಡಳಿತ ಸಹಾಯಕರಾಗಿದ್ದು, ಆ ಸಂಂದರ್ಭದಲ್ಲಿ ಮದ್ದೂರು ಮನ್ ಮುಲ್ ಉಪಕಛೇರಿಯಿಂದ ಕರ್ಯ ವಿಮುಕ್ತಿ ಹೊಂದಿ ಮಳವಳ್ಳಿ ಮಾರುಕಟ್ಟೆ ಕ್ಷೇತ್ರಕ್ಕೆ ವರದಿ ಮಾಡಿಕೊಂಡ ಬಗ್ಗೆ ಮನ್ ಮುಲ್ ನ ವ್ಯವಸ್ಥಾಪಕರಿಗೆ ತಮ್ಮ ಸ್ವ-ಅಕ್ಷರದಿಂದ ಬರೆದಿರುವ ಒಂದು ದಾಖಲೆಯನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆಂದರೆ ನನಗೆ ಗೊತ್ತಿಲ್ಲ.

**<u>ಪಾಟೀ ಸವಾಲುಃ ಆರೋಪಿ ಪರ ವಕೀಲರು: ಶ್ರೀ ವಿ ಆರ್ ರವರಿಂದ</u>**

ನಿ.ಪಿ. *4* ಮಹಜರ್ ನಲ್ಲಿ ಪೋಲೀಸರು ಏನು ಬರೆದಿದ್ದಾರೆಂದು ನನಗೆ ಗೊತ್ತಿಲ್ಲ.

**<u>ಮರು ವಿಚಾರಣೆ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿಯಾಗಿದೆಂದು ಒಪ್ಪಿರುತ್ತಾರೆ.

2 ನೇ ಅಪರ ಸಿವಿಲ್ ಮತ್ತು
ಜೆ.ಎಂ.ಎಫ್.ಸಿ. ನ್ಯಾಯಾಧೀಶರು, ಮದ್ದೂರು.

ಸಾಕ್ಷಿ ಸಹಿಃ